ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **267/2016**

| | | |
|---|---|---|
| ಸಾಕ್ಷಿಯ ಹೆಸರುಃ | ಸದಾನಂದ | ಪ್ರಾಸಾಃ 4 |
| ಗಂಡನ/ತಂದೆಯ ಹೆಸರುಃ | ಬಸಯ್ಯ ಸ್ವಾಮಿ | ಚಾಸಾಃ 7 |
| ವಯಸ್ಸುಃ | 37 ವರ್ಷ | ದಿಃ 07-03-2026 |
| ಉದ್ಯೋಗಃ | ಖಾಸಗಿ ಶಿಕ್ಷಕ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ನೀಲಹಳ್ಳಿ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ದೊಡ್ಡಪ್ಪ. ಚಾಸಾಃ 4 ರವರ ಪರಿಚಯವಿದೆ. ಚಾಸಾಃ 5 ನನ್ನ ಅಣ್ಣ. ಚಾಸಾಃ 6 ನನ್ನ ತಂದೆ. ಚಾಸಾಃ 8 ನನ್ನ ತಮ್ಮ. ನನಗೆ ಆರೋಪಿತರ ಪರಿಚಯವಿದೆ. ದಿನಾಂಕಃ 27-06-2015 ರಂದು ಆರೋಪಿತರು ಮತ್ತು ನಮ್ಮ ನಡುವೆ ಜಾಗದ ಸಲುವಾಗಿ ಜಗಳವಾಗಿರುತ್ತದೆ. ನಾವು ಜಗಳವಾದ ಮರುದಿನ ಊರು ಬಿಟ್ಟು ಹೊರಗೆ ಹೋಗಿರುತ್ತೇವೆ. ಸನಃ 2014 ರಲ್ಲಿ ಆರೋಪಿತರು ನಮ್ಮ ಜಾಗದಲ್ಲಿ ಬಂದು ಕಿರಾಣಿ ಡಬ್ಬಿಗಳನ್ನು ಸುಟ್ಟಿರುತ್ತಾರೆ. ಸದರಿ ಆ ಪ್ರಕರಣವನ್ನು ಹಿಂತೆಗೆದುಕೊಳ್ಳಲು ನಮಗೆ ಹೊಡೆದಿರುತ್ತಾರೆ. ನಾವು ಮನೆ ಸ್ವಚ್ಛ ಮಾಡಲು ದಿನಾಂಕಃ 30-01-2016 ರಂದು ಹೋಗಿ ಮನೆ ಸ್ವಚ್ಛ ಮಾಡಿರುತ್ತೇವೆ. ಸ್ವಲ್ಪ ಕಸ ಉಳಿದಿರುವಾಗ ಮರುದಿನ ಮಾಡೋಣ ಎಂದು ಮರಳಿ ಹೋಗಿರುತ್ತೇವೆ. ದಿನಾಂಕಃ 30-01-2016 ರಂದು ರಾತ್ರಿ ಚಾಸಾಃ 4 ರವರಿಗೆ ಫೋನು ಮಾಡಿ ಆರೋಪಿತರು ನಮ್ಮ ಮನೆಗೆ ನುಗ್ಗಿ ಪತ್ರಾಸ್ ಮತ್ತು ಸಿಮೆಂಟ್ ತಗಡುಗಳು, ಮೇಲ್ಛಾವಣಿ ಹಾಳು ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತೇವೆ. ಸದರಿ ನನ್ನ ತಂದೆಗೆ ಚಾಸಾಃ 1 ರವರು ಫೋನ ಕರೆ ಮಾಡಿ ತಿಳಿಸಿರುತ್ತಾರೆ. ಮರುದಿನ ದಿನಾಂಕಃ 31-01-2016 ರಂದು ನಾವು ಮನೆಗೆ ಹೋಗಿ ನೋಡಿದಾಗ ಮೇಲ್ಛಾವಣಿ ಎಲ್ಲಾ ಒಡೆದು ಹಾಕಿರುತ್ತಾರೆ. ಚದರ ಚತ್ತುಗಳನ್ನು ಆರೋಪಿತರು ಒಡೆದು ಹಾಕಿರುತ್ತಾರೆ. ತದ ನಂತರ ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇವೆ. ಸದರಿ ಹಾಳಾಗಿರುವ ಚತ್ತಿನ ಕಿಮ್ಮತ್ತು ಅಂದಾಜು ಮೊತ್ತ 75,000/-ರೂ. ಆಗಿರುತ್ತದೆ. ಕಲ್ಲುಗಳಿಂದ, ರಾಡುಗಳಿಂದ ಚತ್ತನ್ನು ಒಡೆದು ಹಾಕಿರುತ್ತಾರೆ. ನಾನು ಪೊಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲು ಃಆರೋಪಿ ಪರ ಶ್ರಿ ಜಿ. ಎಸ್. ಎನ್. ವಕೀಲರಿಂದಃ

1. ನಾನು ಸೈದಾಪೂರದಲ್ಲಿ ಖಾಸಗಿ ಶಾಲೆ ಶಿಕ್ಷಕ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಸೈದಾಪೂರದಲ್ಲಿ ವಾಸವಾಗಿರುತ್ತೇನೆ. ನಾನು ಸನಃ 2016 ರಿಂದ ಸೈದಾಪೂರದಲ್ಲಿ ವಾಸವಾಗಿರುತ್ತೇನೆ. ಸದರಿ ಚಾಸಾಃ 1, 2, 4, 5 ರವರು ದೊಡ್ಡಪ್ಪ ಮತ್ತು ಸಂಬಂಧಿಕರು ಆಗಬೇಕು. ಸದರಿ ಆರೋಪಿತರು ಮೇಲ್ಛಾವಣಿ ಒಡೆದಿರುವುದನ್ನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಚಾಸಾಃ 1 ಮತ್ತು ಆರೋಪಿತರ ನಡುವೆ ಹಣಮಂತ ದೇವರ ಗುಡಿ ಜಾಗದ ಸಲುವಾಗಿ ತಕರಾರು ಇತ್ತು ಎಂದರೆ ಸರಿ. ಸದರಿ ತಕರಾರು 15-16 ವರ್ಷಗಳಿಂದ ಇರುತ್ತದೆ ಎಂದರೆ ಸಾಕ್ಷಿಯು ಸನಃ 2014 ರಿಂದ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಚಾಸಾಃ 1 ರವರ ವಿರುದ್ಧ ಜಾಗದ ಸಲುವಾಗಿ ಸಿವಿಲ್ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಜಾಗ ನಮ್ಮದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿವಿಲ್ ದಾವೆ ಆರೋಪಿತರ ಪರವಾಗಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಈ ಪ್ರಕರಣವನ್ನು ದಾಖಲಿಸಿದರೆ ಜಾಗ ಬಿಟ್ಟುಕೊಡುತ್ತಾರೆ ಎಂದು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಚಾಸಾಃ 1 ರವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ಮನೆಗೆ ಹೋಗಿ ಆರೋಪಿತರು ಮೇಲ್ಛಾವಣಿ ಒಡೆದಿರುವುದನ್ನು ನೋಡಿರುತ್ತೇನೆ. ಸದರಿ ಪತ್ರಾಸ್ ಒಡೆದ ಮರುದಿನ ಹೋಗಿ ನೋಡಿರುತ್ತೇನೆ. ದಿನಾಂಕಃ 30-01-2016 ರಂದು ಚಾಸಾಃ 4 ರವರು ಫೋನ ಕರೆ ಮಾಡಿ ಆರೋಪಿತರು ನಷ್ಟ ಮಾಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 75,000/-ರೂ. ನಷ್ಟವಾಗಿದ್ದರ ಬಗ್ಗೆ ಪೊಲಿಸರು ಬರೆದಿರುತ್ತಾರೆ. ಚಾಸಾಃ 1 ಮತ್ತು ನಾವು ನಷ್ಟದ ಬಗ್ಗೆ ಹೇಳಿರುವುದಿಲ್ಲ. ಆರೋಪಿತರು ಯಾವುದೇ ನಷ್ಟ ಮಾಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

+-